INDIAN JOURNAL OF HISTORY AND ARCHAEOLOGY
ISSN (e):2582-225X
Vol-4, Issue -3, September-October, 2022,
PageNo,79-92
Peer Reviewed Journal, Referred Journal

# ಟಿಪ್ಪು ಸುಲ್ತಾನ್ ರಾಜ್ಯಾಡಳಿತದಲ್ಲಿ ಧಾರ್ಮಿಕ ಸಹಿಷ್ಣುತೆ – ಒಂದು ವಿಮರ್ಶಾತ್ಮಕ ವಿಶ್ಲೇಷಣೆ

ಡಾ.ಕೆ.ಗುರುಸ್ವಾಮಿ.[1]

18ನೇ ಶತಮಾನದ ಪೂರ್ವಾರ್ಧವನ್ನು ಬಾದ್ ಷಾ ನಸೀಬ್ ಉದ್–ದೌಲಹ್ ಸುಲ್ತಾನ್ ಫತೇ ಅಲಿಖಾನ್ ಬಹದ್ದೂರ್ ಟಿಪ್ಪುವಿನ ಆಡಳಿತದಲ್ಲಿನ 'ಆಧುನಿಕತೆಯ ಪರ್ವಕಾಲ' ಎಂದು ಕರೆಯಬಹುದು. ಈತನ ರಾಜ್ಯಭಾರವು ಬ್ರಿಟಿಷ್ ವಿರುದ್ಧದ ಯುದ್ಧದಿಂದಲೇ ಪ್ರಾರಂಭವಾಗಿ ಯುದ್ಧದಲ್ಲೇ ಅಂತ್ಯವಾಗಿದ್ದು ದುರಂತ. ಆದರೂ ಈತ ಇಂತಹ ಸಂಕೀರ್ಣತೆಯ ಸಂದರ್ಭದಲ್ಲೂ ಎದೆಗುಂದದೆ ಬಹಳ ಉತ್ಸಾಹದಿಂದ ಪಾಶ್ಚಿಮಾತ್ಯ ಪ್ರಭಾವದ ಆಡಳಿತ ವ್ಯವಸ್ಥೆಯನ್ನು ಜಾರಿಗೊಳಿಸಿದ್ದು ನಿಜಕ್ಕೂ ಶ್ಲಾಘನೀಯ. ಏಕೆಂದರೆ ಟಿಪ್ಪು ಸುಲ್ತಾನನು ಒಬ್ಬ ಉತ್ತಮ ಆಡಳಿತ ತಜ್ಞ ಮತ್ತು ವ್ಯವಹಾರ ನಿಪುಣನಾಗಿದ್ದನು. ಹೀಗಾಗಿ ಟಿಪ್ಪುವು ಹೊಸಹೊಸ ಆಡಳಿತಾತ್ಮಕ ಪ್ರಯೋಗಗಳನ್ನು ಮಾಡಿ ಅದರಲ್ಲಿ ಯಶಸ್ಸಿನ ಹಾದಿಯತ್ತ ಗಮನಹರಿಸಿದ್ದನು. ಇದರ ಹಿನ್ನಲೆಯಲ್ಲಿ ಈತ ತನ್ನ ಅಧಿಕಾರದ ಅವಧಿಯಲ್ಲಿ ಹಲವಾರು ಪ್ರಗತಿದಾಯಕ ಅಭಿವೃದ್ಧಿ ಚಟುವಟಿಕೆಗಳನ್ನು ಕೈಗೊಂಡು ತನ್ನ ರಾಜ್ಯಾಡಳಿತಕ್ಕೆ ಆಧುನಿಕತೆಯ ಮೆರುಗನ್ನು ನೀಡಿದ್ದನು. ಈತ ವಿದೇಶಾಂಗ ನೀತಿ, ಸೈನ್ಯ ವ್ಯವಸ್ಥೆ, ಕೈಗಾರಿಕೆಗಳ ಸ್ಥಾಪನೆ, ವೈಜ್ಞಾನಿಕತೆ, ತಂತ್ರಜ್ಞಾನ ಕೌಶಲ, ಯುದ್ಧ ಶಸ್ತ್ರಾಸ್ತ್ರಗಳ ಉತ್ಪಾದನೆ, ಆರ್ಥಿಕ ನೀತಿ, ಮಾರುಕಟ್ಟೆ ಪದ್ಧತಿ, ಅಳತೆ ಮತ್ತು ಮಾಪನಗಳು, ವಾಣಿಜ್ಯ–ವ್ಯಾಪಾರ, ಕರಕುಶಲತೆ, ಲಿಪಿಶಾಸ್ತ್ರ, ಲಲಿತ ಕಲೆ, ಸಾಹಿತ್ಯ, ಕಲೆ ಮತ್ತು ವಾಸ್ತುಶಿಲ್ಪ ಕ್ಷೇತ್ರಗಳಿಗೆ ತನ್ನದೇ ಆದ ಚಿರಸ್ಥಾಯಿಯಾದ ಕೊಡುಗೆಗಳನ್ನು ನೀಡಿದ್ದಾನೆ. ಜೊತೆಗೆ ಟಿಪ್ಪುವು ತನ್ನ 'ಸರ್ವ ಸಮಾನತಾವಾದ' ತತ್ವದ ಪರಿಕಲ್ಪನೆಯಲ್ಲಿ ಧರ್ಮ ಸಹಿಷ್ಣು ನೀತಿಗೆ ನೀಡಿದ ಪ್ರೋತ್ಸಾಹ ಇತರಿಗೆ ಮಾದರಿ. ಹೀಗಾಗಿ ಈ ಲೇಖನದಲ್ಲಿ 'ಧಾರ್ಮಿಕ ಉದಾರತೆಯ ತಂದೆಗೆ ತಕ್ಕ ಮಗ ಟಿಪ್ಪು ಸುಲ್ತಾನ್', 'ಮೈಸೂರು ರಾಜ್ಯದಲ್ಲಿ ಪರಮತ ಸಹಿಷ್ಣುತೆಯ ಕೈಗನ್ನಡಿ ಟಿಪ್ಪು ಸುಲ್ತಾನ್', 'ಶೃಂಗೇರಿಯ ಶಾರದಾ ಪೀಠಕ್ಕೆ ಟಿಪ್ಪು ಸುಲ್ತಾನನ ಕೊಡುಗೆಗಳು' ಹಾಗೂ 'ಬ್ರಿಟಿಷ್ ಕಾಲದ ಬರಹಗಾರರ ಏಕಮುಖ ದೃಷ್ಟಿಯಲ್ಲಿ ಧರ್ಮಾಂಧನಾಗಿ ಟಿಪ್ಪು ಸುಲ್ತಾನ್' ಎಂಬ ಉಪಶೀರ್ಷಿಕೆಗಳಡಿಯಲ್ಲಿ ಟಿಪ್ಪುವಿನ ಧಾರ್ಮಿಕ ನೀತಿಯನ್ನು ಪ್ರಸ್ತುತಪಡಿಸಲು ಪ್ರಯತ್ನಿಸಿದ್ದೇನೆ.

1. ಸಮಾಜ–ವಿಜ್ಞಾನ ಶಿಕ್ಷಕರು ,ಅಲ್ಪಸಂಖ್ಯಾತರ ಮೊರಾರ್ಜಿ ದೇಸಾಯಿ ವಸತಿ ಶಾಲೆ, ಹೊಳೆನರಸೀಪುರ, ಹಾಸನ.

- **ಧಾರ್ಮಿಕ ಉದಾರತೆಯ ತಂದೆಗೆ ತಕ್ಕ ಮಗ ಟಿಪ್ಪು ಸುಲ್ತಾನ್:**

18ನೇ ಶತಮಾನದ ಮಧ್ಯ ಭಾಗದ ಮೈಸೂರು ರಾಜ್ಯದಲ್ಲಿ ಇಸ್ಲಾ ಧರ್ಮದ ಮುಸ್ಲೀಂ ಪಾರುಪತ್ಯವನ್ನು ಮೊದಲಿಗೆ ಸ್ಥಾಪಿಸಿದ ಶ್ರೇಯ ಟಿಪ್ಪು ಸುಲ್ತಾನನ ತಂದೆ ಹೈದರ್‌ಅಲಿಗೆ ಸಲ್ಲುತ್ತದೆ. ಹೈದರ್ ಅಲಿಯು ಅನಕ್ಷರಸ್ಥನಾಗಿದ್ದರೂ, ಆಡಳಿತ ನಿರ್ವಹಣೆಯಲ್ಲಿ ಸುಶಿಕ್ಷಿತರಿಗಿಂತಲೂ ಒಂದು ಕೈ ಮೇಲೆ ಇದ್ದನು. ಈತ ರಣರಂಗದಲ್ಲಿ ಯುದ್ಧೋತ್ಸಾಹಿ ಆಗಿದ್ದನಲ್ಲದೆ, ಆಡಳಿತಸೇವೆಯಲ್ಲಿ ಇನ್ನೊಬ್ಬರಿಗೆ ಆದರ್ಶವಾಗಿದ್ದನು. ಜೊತೆಗೆ ಸಂಪ್ರದಾಯಬದ್ಧ ಮುಸ್ಲೀಮನಾಗಿದ್ದರೂ ಸಹ ಯಾವುದೇ ಪೂರ್ವಾಗ್ರಹ ಆಲೋಚನೆಗೆ ಒಳಗಾಗದೆ ಎಲ್ಲಾ ಧರ್ಮೀಯರನ್ನು ಸಹೃದಯತೆಯಿಂದ ನೋಡಿಕೊಳ್ಳುತ್ತಿದ್ದನು. ಇವರುಗಳ ಮೇಲೆ ಯಾವುದೇ ರೀತಿಯಲ್ಲೂ ಸಹ ಧರ್ಮದ ಹೆಸರಿನಲ್ಲಿ ಅನಮ್ಯಯುತವಾದ ನೀತಿನಿಯಮಗಳ ನಿರ್ಬಂಧವನ್ನು ಹೇರುತ್ತಿರಲಿಲ್ಲ. ಬ್ರಿಟಿಷ್ ಬರಹಗಾರ ಫಾದರ್ ಸ್ವಾರ್ಡ್ಜ್ ಹೇಳುವಂತೆ 'ಹೈದರ್‌ಅಲಿಯು ಪರಮತ ಸಹಿಷ್ಣುವಾಗಿದ್ದು, ಪ್ರತಿಯೊಬ್ಬರೂ ಕೂಡ ತಮ್ಮ ಧರ್ಮವನ್ನು ತಮ್ಮ ಇಚ್ಛೆಗನುಗುಣವಾಗಿ ತಾವೇ ಆರಿಸಿಕೊಳ್ಳುವ ಸ್ವಾತಂತ್ರ್ಯವನ್ನು ನೀಡಿದ್ದನು' ಎಂದು ಅಭಿವ್ಯಕ್ತಿಸಿರುವುದು ಹೈದರ್‌ನ ಔದಾರ್ಯತೆಯ ಪ್ರತಿರೂಪವಾಗಿದೆ.

ಹೈದರ್‌ಅಲಿಯು ತನ್ನ ಸೈನ್ಯದಲ್ಲಿ ಹಿಂದೂ ಧರ್ಮದ ಸೈನಿಕರನ್ನು ನೇಮಿಸಿಕೊಳ್ಳುತ್ತಿದ್ದನು. ಈ ಸೈನಿಕರು ಯಾವುದೇ ಯುದ್ಧಕ್ಕೆ ಹೋಗುವ ಮುನ್ನ ರಂಗನಾಥಸ್ವಾಮಿ ದೇವಸ್ಥಾನದಲ್ಲಿ ಪೂಜೆ ಸಲ್ಲಿಸುವ ಅಭ್ಯಾಸವನ್ನಿಟ್ಟುಕೊಂಡಿದ್ದರು. ಇದಕ್ಕೆ ಹೈದರ್‌ಅಲಿಯಿಂದ ಯಾವುದೇ ರೀತಿಯ ಅಡೆತಡೆಗಳಿರಲಿಲ್ಲ. ಯಾವಾಗಲೂ ಹೈದರ್‌ಅಲಿಯ ಕಡೆಯಿಂದ ಇದಕ್ಕೆ ಪ್ರೋತ್ಸಾಹ ಇರುತ್ತಿತ್ತು. ಹೈದರ್‌ಅಲಿಯು ರಾಜ್ಯದ ಬ್ರಾಹ್ಮಣವರ್ಗಗಳ ಸೇವೆಗೆ ಇನಾಂ (ಉಡುಗೊರೆ) ರೂಪದಲ್ಲಿ ಕೃಷಿ ಭೂಮಿಯನ್ನು ನೀಡುತ್ತಿದ್ದನು. ಸರಿಸುಮಾರು 1774ರ ಸಮಯದಲ್ಲಿ ರಾಜಧಾನಿಯಾಗಿದ್ದ ಶ್ರೀರಂಗಪಟ್ಟಣದ ರಂಗನಾಥಸ್ವಾಮಿ ದೇವಾಲಯದ ಒಂದು ಭಾಗ ಬೆಂಕಿ ಅನಾಹುತದಿಂದ ಹಾಳಾಗಿಹೋಗಿತ್ತು. ಇದನ್ನು ತಿಳಿದ ಹೈದರ್‌ಅಲಿಯು ಒಂದೇ ತಿಂಗಳಿನಲ್ಲಿ ದೇವಾಲಯಕ್ಕಾಗಿದ್ದ ಹಾನಿಯನ್ನು ಸರಿಮಾಡಿಸಿದ್ದನು.[1]

ಇದಲ್ಲದೆ ಹೈದರ್‌ಅಲಿಯು ಇನ್ನು ಹಲವಾರು ರೀತಿಯ ಧರ್ಮಾತೀತ ಕೆಲಸಕಾರ್ಯಗಳನ್ನು ಬಹಳ ಆಸ್ಥೆಯಿಂದ ಮಾಡುತ್ತಿದ್ದನು. ಹೀಗಾಗಿ ಈ ವಿಚಾರದಲ್ಲಿ ಈತನ ನಂತರದಲ್ಲಿ ಇವನ ಮಗ ಟಿಪ್ಪು ಸುಲ್ತಾನನ ಮೇಲೆ ಯಾವುದೇ ರೀತಿಯ ಸಂದೇಹಪಡುವ ಹಾಗೆ ಇಲ್ಲ. ಏಕೆಂದರೆ ಹೈದರ್‌ಅಲಿಯು ತನ್ನಂತೆ ನನ್ನ ಮಗನೂ ಅವಿದ್ಯಾವಂತನಾಗಬಾರದೆಂದು ತೀರ್ಮಾನಿಸಿ ಉನ್ನತ ಮಟ್ಟದ ಪಾಶ್ಚಿಮಾತ್ಯ ಶಿಕ್ಷಣವನ್ನು ಕೊಡಿಸಿದ್ದನು. ಹೀಗಾಗಿ ಟಿಪ್ಪು ಸುಲ್ತಾನನು ಇದನ್ನು ಬಹಳ ಶ್ರದ್ಧೆಯಿಂದ ಅಧ್ಯಯನ ಮಾಡಿ ಜ್ಞಾನದ ದಿವ್ಯಬೆಳಕನ್ನು ಸಂಪಾದಿಸಿದನು. ಜೊತೆಗೆ ಟಿಪ್ಪು ಸುಲ್ತಾನನು ಮಾನವಿಕ ಶಾಸ್ತ್ರ, ವಿಜ್ಞಾನ, ಇತಿಹಾಸ, ತತ್ವಶಾಸ್ತ್ರ, ದೈವ ಪ್ರಭುತ್ವ, ಸೂಫಿವಾದ, ಪುರಾಣಗಳು, ನ್ಯಾಯಶಾಸ್ತ್ರ, ಸಾಹಿತ್ಯ, ಟರ್ಕಿ ದೇಶದ

ಗದ್ಯಗಳು, ನೀತಿ ಕಥೆಗಳು, ಹಿಂದಿ ಮತ್ತು ದಖ್ಖನ್ ಭಾಷೆಗಳ ಗದ್ಯ, ಪದ್ಯಗಳು, ಕಲಾ ವಿಭಾಗ, ಗಣಿತಶಾಸ್ತ್ರ, ಖಗೋಳಶಾಸ್ತ್ರ, ಜ್ಯೋತಿಷ್ಯಶಾಸ್ತ್ರ, ಭೌತಶಾಸ್ತ್ರ, ವೈದ್ಯಶಾಸ್ತ್ರಗಳಲ್ಲಿ ಅದ್ವಿತೀಯ ಪರಿಣತಿಯನ್ನು ಪಡೆದುಕೊಂಡನು.[2] ಈ ರೀತಿಯಲ್ಲಿ ಸ್ವಸಾಮರ್ಥದಿಂದ ಜ್ಞಾನಸಂಪನ್ನತೆಯನ್ನು ಗಳಿಸಿದ ಟಿಪ್ಪು ಸುಲ್ತಾನನು ಯುದ್ಧ ಕಲೆ, ಜಾಣ್ಮೆ, ವ್ಯವಹಾರ ಚತುರತೆ, ಚಾಕಚಕ್ಯತೆ, ಮಾನವೀಯ ಮೌಲ್ಯಗಳು, ಹೃದಯ ವೈಶಾಲ್ಯತೆ, ಉದಾರತೆ, ಸಹನಾಶೀಲತೆ, ಸಹಿಷ್ಣುತೆ, ಸ್ವಾಭಿಮಾನ, ದೇಶಪ್ರೇಮ, ಆದರತೆ, ಮೋಸ, ವಂಚನೆ, ಸಂಚುಗಳ ವಿರೋಧಿ ನೀತಿಗಳನ್ನು ಮೈಗೂಡಿಸಿಕೊಂಡಿದ್ದನು. ಇವೆಲ್ಲವುಗಳ ಹಿನ್ನಲೆಯಲ್ಲಿ ಟಿಪ್ಪು ಸುಲ್ತಾನನು ತಂದೆಗೆ ತಕ್ಕ ಮಗನಾಗಿ ಪರಮತ ಸಹಿಷ್ಣುತೆಯ ಆಚರಣೆಯಲ್ಲಿ ತನ್ನ ತಂದೆಗಿಂತಲೂ ಒಂದು ಹೆಜ್ಜೆ ಮುಂದಿದ್ದನು.

- **ಮೈಸೂರು ಸಂಸ್ಥಾನದಲ್ಲಿ ಪರಮತ ಸಹಿಷ್ಣುತೆಯ ಕೈಗನ್ನಡಿ ಟಿಪ್ಪು ಸುಲ್ತಾನ್:**

ಟಿಪ್ಪು ಸುಲ್ತಾನನು ತನ್ನ ಆಡಳಿತ ಅವಧಿ(1782–1799)ಯಲ್ಲಿ ಧಾರ್ಮಿಕ ಸಹಿಷ್ಣುತೆಯ ಪೋಷಕ, ಪಾಲಕ ಮತ್ತು ಆಶ್ರಯದಾತನಾಗಿದ್ದನು. ಈತ ಇಸ್ಲಾಂ ಧರ್ಮದ ನಿಷ್ಠ ಸಂಪ್ರದಾಯಸ್ಥನಾಗಿದ್ದರೂ ಸಹ ಹಿಂದೂ–ಮುಸ್ಲೀಮರ ನಡುವಿನ ಐಕ್ಯತೆಯ ಸಂಕೇತವಾಗಿದ್ದನು. ಇದಕ್ಕೆ ಸಾಕ್ಷಿ ಎಂಬಂತೆ ಸಾಕಷ್ಟು ದಾಖಲೆಗಳು ಮತ್ತು ಹಲವಾರು ಶಾಸನಗಳು ಲಭಿಸಿ ಆಧಾರ ಸಮೇತವಾಗಿ ಸ್ಪಷ್ಟಪಡಿಸಿವೆ. ಇವುಗಳು ಉಲ್ಲೇಖಿಸಿರುವಂತೆ ಟಿಪ್ಪು ಸುಲ್ತಾನನು ಮೈಸೂರು ರಾಜ್ಯವನ್ನು ಒಳಗೊಂಡಂತೆ ನೆರೆಹೊರೆಯ ಪ್ರದೇಶಗಳಲ್ಲಿನ ಹಿಂದೂ ದೇವಾಲಯಗಳು, ಮಠಗಳಿಗೆ ವಿಶೇಷ ದಾನಧತ್ತಿಗಳು, ಕಾಣಿಕೆಗಳು, ಉಡುಗೊರೆಗಳು, ಇವುಗಳ ಜೀರ್ಣೋದ್ಧಾರ, ಧನಕನಕಾದಿ ವಸ್ತ್ರಾಭರಣಗಳನ್ನು ಜಾತಿ–ಮತರಹಿತ ಭಾವನೆಯಿಂದ ನೀಡಿರುವುದು ಈತನ ಉದಾರತೆಗೆ ಸಂದ ಹಿರಿಮೆ.

ಟಿಪ್ಪು ಸುಲ್ತಾನನು ಸುಮಾರು 156ಕ್ಕಿಂತ ಹೆಚ್ಚು ಹಿಂದೂ ದೇವಾಲಯಗಳಿಗೆ ವಿಶೇಷ ದಾನದತ್ತಿಗಳನ್ನು ನೀಡಿದ್ದಾನೆ. ಅದರಲ್ಲೂ ಶ್ರೀರಂಗಪಟ್ಟಣದಲ್ಲಿರುವ ಶ್ರೀರಂಗನಾಥಸ್ವಾಮಿ ದೇವಾಲಯಕ್ಕೆ 7 ಬೆಳ್ಳಿ ಲೋಟಗಳು ಮತ್ತು ಗಂಧದ ಕಡ್ಡಿಗಳನ್ನು ಸಿಕ್ಕಿಸುವ ಬೆಳ್ಳಿ ಕಂಡಿಕೆಗಳನ್ನು ನೀಡಿದ್ದನು.[3] ಜೊತೆಗೆ ಇದೇ ದೇವಸ್ಥಾನಕ್ಕೆ 3 ಬೆಳ್ಳಿ ಬಟ್ಟಲುಗಳು, ಬೆಳ್ಳಿ ಪಂಚಾರತಿ ಹಾಗೂ ಅಲ್ಲೇ ಸನಿಹದಲ್ಲಿರುವ ರಂಗನಾಯಕ ದೇಗುಲಕ್ಕೆ 3 ಬೆಳ್ಳಿ ಬಟ್ಟಲುಗಳನ್ನು ಕಾಣಿಕೆಯಾಗಿ ಕೊಟ್ಟಿದ್ದನು.[4] ಟಿಪ್ಪುವಿಗೆ ಹಿಂದೂ ಧರ್ಮದಲ್ಲಿನ ದೇವರುಗಳ ದೈವಭಕ್ತಿ ಅಪಾರವಾಗಿತ್ತು. ಈತನ ಅರಮನೆಯ ಸಮೀಪವೇ ಶ್ರೀರಂಗನಾಥಸ್ವಾಮಿ ದೇವಾಲಯವಿದ್ದುದರಿಂದಾಗಿ, ಪ್ರತಿನಿತ್ಯ ಬರುತ್ತಿದ್ದ ದೇವರ ಗಂಟೆಗಳ ನಿನಾದವನ್ನು ಮಸೀದಿಯಲ್ಲಿ ನಡೆಸುವ ಪ್ರಾರ್ಥನೆಗೆ ನೀಡುವ ಕರೆಯ ಸಂಕೇತವೆಂದೇ ಭಾವಿಸಿ ಪೂಜ್ಯ ಭಾವನೆಯಿಂದ ಕೇಳಿಸಿಕೊಳ್ಳುತ್ತಿದ್ದನು. ಇದಿಷ್ಟು ಮಾತ್ರವಲ್ಲದೆ ಟಿಪ್ಪುವು ಮೇಲುಕೋಟೆಯಲ್ಲಿರುವ ವೈಷ್ಣವ ಪಂಥದ ಪ್ರಧಾನ ದೇವರಾದ ಚೆಲುವ ನಾರಾಯಣಸ್ವಾಮಿ ದೇವಾಲಯಕ್ಕೆ 1 ಆನೆ ಮತು ಬೆಳ್ಳಿಯ ಪಾತ್ರೆಗಳನ್ನು

ಉದಾರವಾಗಿ ನೀಡಿದ್ದನು.[5] ಅಮ್ಮಾಳ್ವಾರ್ ದೇವಸ್ಥಾನಕ್ಕೆ 2 ಬೆಳ್ಳಿ ಗುಂಡು ಬಟ್ಟಲುಗಳು, ಇಲ್ಲೇ ಇದ್ದ ನರಸಿಂಹಸ್ವಾಮಿ ದೇವಾಲಯಕ್ಕೆ ಶ್ರೀರಂಗಪಟ್ಟಣದ ಹಜಾರ ನಾಯಕ ಶ್ರೀನಿವಾಸಚಾರಿ ಎಂಬ ಅಧಿಕಾರಿಯ ಮೂಲಕ 2 ಆನೆ, 10 ಹೆಣ್ಣಾನೆಗಳನ್ನು ಕಳುಹಿಸಿಕೊಟ್ಟಿದ್ದನು.[6]

12ನೇ ಶತಮಾನದಲ್ಲಿ ಇದೇ ಮೇಲುಕೋಟೆಯ ಚೆಲುವ ನಾರಾಯಣಸ್ವಾಮಿ ದೇವಾಲಯದ ಸನ್ನಿಧಿಯಲ್ಲಿ ಶ್ರೀವೈಷ್ಣವ ಪಂಥದ ರಾಮಾನುಜಾಚಾರ್ಯರು (ತಮಿಳುನಾಡು) ನೆಲೆಸಿ ಹಲವಾರು ಶಿಷ್ಯ ಬಳಗ ಹಾಗೂ ಅನುಯಾಯಿಗಳನ್ನು ಹೊಂದಿದ್ದರು. ಇವರ ಈ ಅನುಯಾಯಿಗಳ ತಲೆಮಾರು ಟಿಪ್ಪುವಿನ ಕಾಲದಲ್ಲೂ ಇದ್ದರು. ಇಲ್ಲಿ ಇವರುಗಳು ಶ್ರೀವೈಷ್ಣವ ಪಂಥವನ್ನು 'ವಡಗಲೈ' (ಉತ್ತರಾರ್ಧದವರು) ಹಾಗೂ 'ತೆಂಕಲೈ'(ದಕ್ಷಿಣಾರ್ಧದವರು) ಎಂಬುದಾಗಿ ಎರಡು ಭಾಗಗಳಾಗಿ ವಿಭಜಿಸಿಕೊಂಡು ಪೂಜಾವಿಧಾನದಲ್ಲಿ ವಿಭಿನ್ನವಾದ ರೀತಿಯಲ್ಲಿ ತಾತ್ವಿಕ ಮತ್ತು ಆಧ್ಯಾತ್ಮಿಕ ಚಿಂತನೆಗಳ ಘರ್ಷಣೆಗೆ ಇಳಿದಿದ್ದರು. ಇವರಲ್ಲಿ ಹಣೆಗೆ ಧರಿಸುವ ವಿಭೂತಿಯ ಆಕಾರದಲ್ಲೂ ಕೂಡ ವ್ಯಾಜ್ಯ ಏರ್ಪಟ್ಟಿತ್ತು. ವಡಗಲೈ ಪಂಥದವರು 'U' ಆಕಾರದಲ್ಲೂ, ತೆಂಕಲೈ ಪಂಥದವರು 'Y' ಆಕಾರದಲ್ಲಿ ವಿಭೂತಿಯನ್ನು ಇಟ್ಟುಕೊಳ್ಳುತ್ತಿದ್ದರು. ಅಲ್ಲದೆ ವಡಗಲೈಯವರು ಸಂಸ್ಕೃತ ಸಾಹಿತ್ಯಕ್ಕೂ, ತೆಂಕಲೈರವರು ತೆಮಿಳು ಪ್ರಬಂಧಂ ಸಾಹಿತ್ಯಕ್ಕೆ ಒತ್ತುಕೊಟ್ಟಿದ್ದರು. ಜೊತೆಗೆ ವಡಗಲೈ ಪಂಥದವರ ದೇವರ ಪೂಜಾ ಕಾರ್ಯದ ಶ್ಲೋಕವು 'ರಾಮಾನುಜ ದಯಾ ಪತ್ರಂ'ನಿಂದ ಆರಂಭವಾದರೆ, ತೆಂಕಲೈ ಪಂಥದವರು 'ಶ್ರೀಶೈಲೇಶ ದಯಾ ಪತ್ರಂ' ಶ್ಲೋಕದಿಂದಲೇ ಪ್ರಾರಂಭವಾಗುತ್ತಿತ್ತು. ಇದರ ಪರಿಣಾಮವೇ ಇವರಿಬ್ಬರ ನಡುವಿನ ಸಂಘರ್ಷಕ್ಕೆ ಕಾರಣವಾಗಿತ್ತು. ಇದನ್ನು ತಿಳಿದ ಟಿಪ್ಪು ಸುಲ್ತಾನನು ಇವರ ಆಹ್ವಾನದಿಂದಲೇ ಮಧ್ಯೆ ಪ್ರವೇಶಿಸಿ ಇವರ ನಡುವಿನ ವಿರಸಗಳನ್ನು ಪರಿಹರಿಸಿ ಸಾಮರಸ್ಯದಿಂದ ಬದುಕುವಂತೆ ಮಾಡಿದನು. ಇದು ಆತನ ಸರ್ವಸಮಾನತೆಯ ಧಾರ್ಮಿಕ ನೀತಿಯ ಕಾಳಜಿಯೇ ಆಗಿದೆ.[7]

ಅಲ್ಲದೆ ಟಿಪ್ಪು ಸುಲ್ತಾನನು ಮಳವಳ್ಳಿ ತಾಲ್ಲೂಕಿನ ಹುಲ್ಲೇಗಾಲದ ಹಿಂದೂ ಧರ್ಮದ ಗೌಡರಿಗೆ ಇನಾಂ ಭೂಮಿಯನ್ನು ಉಡುಗೊರೆ ರೂಪದಲ್ಲಿ 31 ಜುಲೈ, 1780ರ ಸಮಯದಲ್ಲಿ ನೀಡಿದ್ದನು.[8] ಇದೇ ರೀತಿಯಲ್ಲಿ ತುಮಕೂರು ಜಿಲ್ಲೆಯ ಕುಣಿಗಲ್ ತಾಲ್ಲೂಕಿನ ಎಡೆಯೂರು ಸಿದ್ದಲಿಂಗೇಶ್ವರ ಸ್ವಾಮಿ ದೇವಾಲಯಕ್ಕೆ ಗಂಟೆಯೊಂದನ್ನು ಸೇವೆಯಾಗಿ ಈತನಿಂದಲೇ ಸಲ್ಲಿಕೆಯಾಗಿತ್ತು.[9]

ನಂತರದ ಅವಧಿಯಲ್ಲಿ ಮೈಸೂರು ಜಿಲ್ಲೆಯ ನಂಜನಗೂಡು ತಾಲ್ಲೂಕಿನಲ್ಲಿರುವ ಶ್ರೀಕಂಠೇಶ್ವರ ದೇವಾಲಯಕ್ಕೆ 1 ರತ್ನ ಖಚಿತ ಬಟ್ಟಲನ್ನು ಮತ್ತು ಕೆಲವು ವಜ್ರವನ್ನು ಕೊಡುಗೆ ಕೊಟ್ಟಿದ್ದನು.[10] ಅಲ್ಲದೆ ಇದೇ ದೇವಸ್ಥಾನಕ್ಕೆ ಹಸಿರುಬಣ್ಣದ ಲಿಂಗವೊಂದನ್ನು ನೀಡಿದ್ದನು. ಇದಕ್ಕೆ 'ಪಚ್ಚೆ ಲಿಂಗ', 'ಬಾದ್‌ಷಾ ಲಿಂಗ' ಅಥವಾ 'ಗ್ರೀನ್ ಜೇಡ್ ಲಿಂಗ' ಎಂಬ ಹೆಸರಿತ್ತು. ಇದನ್ನು ಟಿಪ್ಪುವಿನ ಆದೇಶದ ಮೇರೆಗೆ ಪ್ರತಿಷ್ಠಾಪಿಸಲಾಯಿತೆಂದು ಮೈಸೂರು ಪುರಾತತ್ವ ಇಲಾಖೆಯ ವರದಿ 1940ರಲ್ಲಿ ತಿಳಿಸಿದೆ. ಜೊತೆಗೆ

ಟಿಪ್ಪುವು ಈ ಲಿಂಗಕ್ಕೆ ಪಚ್ಚೆಹಾರವನ್ನು ನೀಡಿದ್ದನೆಂದು ಹೇಳಲಾಗಿದೆ.[11] ಇದೇ ತಾಲ್ಲೂಕಿನ ಕಳಲೆ ಎಂಬ ಸ್ಥಳದಲ್ಲಿ ಲಕ್ಷ್ಮೀಕಾಂತ ದೇವಸ್ಥಾನವಿದೆ. ಈ ದೇವಾಲಯಕ್ಕೆ ಟಿಪ್ಪು ಸುಲ್ತಾನನು 4 ಬೆಳ್ಳಿ ಬಟ್ಟಲುಗಳು ಮತ್ತು 1 ಬೆಳ್ಳಿ ಲೋಹದ ಉಗುಳಲು ಬಳಸುವ ಪಾತ್ರೆಯನ್ನು ದೈವಿಕ ಭಾವನೆಯಿಂದ ವಿತರಿಸಿದ್ದನು. ಅಲ್ಲದೆ ಇದೇ ದೇವಾಲಯಕ್ಕೆ ದೊಡ್ಡದಾದ ಒಂದು ಬೆಳ್ಳಿತಟ್ಟೆ ಅಥವಾ ಹರಿಣವನ್ನು ನೀಡಿದ್ದಕ್ಕೆ ಸಾಕ್ಷಿ ಎಂಬಂತೆ ತಟ್ಟೆಯಲ್ಲಿ ಬರೆಸಲಾಗಿರುವ ಶಾಸನದಿಂದ ತಿಳಿದು ಬಂದಿದೆ.[12] ಟಿಪ್ಪು ಸುಲ್ತಾನನು ಅಪಾರ ಜ್ಞಾನವಂತನಾಗಿದ್ದರಿಂದ ಮೂಢನಂಬಿಕೆ ಮತ್ತು ಅಂಧಶ್ರದ್ಧೆಗಳಿಗೆ ವಿರುದ್ಧವಾಗಿದ್ದನು. ಇದಕ್ಕೆ ಉತ್ತಮ ಉದಾಹರಣೆ ಈತ ಮೈಸೂರಿನ ಕಾಳಿ ದೇವಸ್ಥಾನದಲ್ಲಿ ಬಹಳ ಕಟ್ಟುನಿಟ್ಟಾಗಿ ಆಚರಿಸುತ್ತಿದ್ದ ನರಬಲಿಯನ್ನು ಯಾವ ಶಿಷ್ಟಾಚಾರಗಳಿಗೆ ಸೊಪ್ಪು ಹಾಕದೆ ನಿಷೇಧಿಸಿದ್ದುದೇ ಆಗಿದೆ.[13]

ಇವಿಷ್ಟೇ ಅಲ್ಲದೆ ಟಿಪ್ಪು ಸುಲ್ತಾನನು ದಕ್ಷಿಣ ಭಾರತದ ನೆರೆಹೊರೆಯ ಪ್ರಾಂತ್ಯಗಳಲ್ಲಿನ ಹಲವಾರು ದೇವಾಲಯ, ಮಠಗಳಿಗೆ ವಿಶೇಷ ದಾನದತ್ತಿ, ಭೂಮಿಯ ಇನಾಂ ಮತ್ತು ಜೀರ್ಣೋದ್ಧಾರ ಕಾರ್ಯಗಳನ್ನು ಮಾಡಿಸಿದ್ದಾನೆ. ಅಂತಹ ದೇವಾಲಯಗಳಲ್ಲಿ ರತ್ನಗಿರಿಯ ಶ್ರೀವೆಂಕಟರಮಣ ದೇಗುಲ, ತಿರುಪತಿ ದೇವಸ್ಥಾನ, ಪುಷ್ಪಗಿರಿ ಮಠ, ಗಂಡಿಕೋಟೆಯ ಆಂಜನೇಯಸ್ವಾಮಿ ದೇವಸ್ಥಾನ, ಗಟ್ಟುಪೇಟೆಯ ನರಸಿಂಹಸ್ವಾಮಿ ದೇವಾಲಯ, ಮಂಚನೂರಿನ ಚನ್ನಕೇಶವ ದೇವಾಲಯ, ಮತ್ತೂರಿನ ಪ್ರಸನ್ನ ವೆಂಕಟೇಶ್ವರ ದೇವಸ್ಥಾನ, ಪೆರವಳಿಯ ಶ್ರೀರಂಗ ದೇವಾಲಯಗಳು ಪ್ರಮುಖವಾದವುಗಳು.[14] ಹೈದರ್‌ಅಲಿಯು 1780ರ ಸಮಯದಲ್ಲಿ ಕಾರ್ನಾಟಿಕ್ ಮೇಲೆ ದಾಲಿ ಮಾಡಿದ್ದಾಗ ಅಲ್ಲಿನ ಕಾಂಜೀವರಂ ದೇವಾಲಯಕ್ಕೆ ಅಸ್ತಿಭಾರ ಹಾಕಿಸಿದ್ದನು. ಆದರೆ ಹೈದರ್‌ಗೆ ಬ್ರಿಟಿಷ್ ಮೇಲಿನ ಯುದ್ಧಗಳ ಒತ್ತಡದಲ್ಲಿ ಇದನ್ನು ಪೂರ್ಣಗೊಳಿಸಲಾಗಿರಲಿಲ್ಲ. ಕ್ರಮೇಣ ಟಿಪ್ಪು ಸುಲ್ತಾನನು 10000 ಹೊನ್ನುಗಳನ್ನು ನೀಡಿ ಈ ದೇವಸ್ಥಾನದ ಜೀರ್ಣೋದ್ಧಾರದ ಕೆಲಸವನ್ನು ಪೂರ್ಣಗೊಳಿಸಿದನಲ್ಲದೆ, ಇದರ ರಥೋತ್ಸವದಲ್ಲೂ ಭಾಗವಹಿಸಿದ್ದನು.[15] ಜೊತೆಗೆ ಪೂಜಾ ಆಚರಣೆಗಳು ಸ್ಥಗಿತಗೊಂಡಿದ್ದ ಮಲ್ಲಿವೆಂಡದ ಆಂಜನೇಯಸ್ವಾಮಿ ದೇವಾಲಯದಲ್ಲಿ ಪೂಜೆಯ ವಿಧಿವಿಧಾನಗಳನ್ನು ಪುನಃ ಪ್ರಾರಂಭವಾಗುವಂತೆ ಕಾಳಜಿ ವಹಿಸಿದ್ದನು. ಪಶ್ಚಿಮ ಕರಾವಳಿ ಭಾಗದ ಮಲಬಾರ್ ಪ್ರದೇಶದಲ್ಲಿದ್ದ ಹಿಂದೂ ದೇವಾಲಯಗಳ ನಿರ್ಮಾಣಕ್ಕೆ ಬಾಡಿಗೆರಹಿತವಾಗಿ ಭೂಮಿಯನ್ನು ನೀಡಿದ್ದನು. ಅಲ್ಲದೆ ರಾಯಕೊಟ್ಟೈ ದೇವಾಲಯದ ಪೂಜಾರಿಗೆ ಪ್ರತಿನಿತ್ಯ ಸೇವಾ ಹಣ ಸಂದಾಯವಾಗುವಂತೆ ಗಮನಹರಿಸಿದ್ದನು.[16]

ಟಿಪ್ಪು ಸುಲ್ತಾನನು ತನ್ನ ಧಾರ್ಮಿಕ ನೀತಿಯಲ್ಲಿ 'ಬದುಕಿ ಮತ್ತು ಇತರರನ್ನು ಕೂಡ ಬದುಕಲು ಬಿಡಿ' ಎಂಬ ತತ್ವಾದರ್ಶಗಳಿಗೆ ಮನ್ನಣೆ ನೀಡಿದ್ದನು. ಒಮ್ಮೆ ಹಿಂದೂ ಧರ್ಮದ ಹುಡುಗನೊಬ್ಬ ಮುಸ್ಲಿಂ ಹುಡುಗಿಯನ್ನು ವರಿಸಿದ್ದನು. ಇದನ್ನು ತಿಳಿದ ಪೌಜುದಾರನೊಬ್ಬ ಈ ಪ್ರಕರಣದ ವಿರುದ್ಧವಾಗಿ ಟಿಪ್ಪುವಿಗೆ ದೂರು ನೀಡಿದ್ದನು. ಇಸ್ಲಾಂ ಧರ್ಮದ 'ಶರಿಯತ್' ಪ್ರಕಾರ ಇಂತಹ ಮದುವೆಗಳನ್ನು ಮಾಡಿಕೊಂಡ

ವಧುವರರಿಗೆ ಉಗ್ರಶಿಕ್ಷೆಯೇ ಕಾದಿರುತ್ತಿತ್ತು. ಆದರೆ ಈ ವಿಷಯವನ್ನು ತಿಳಿದ ಟಿಪ್ಪು ಸುಲ್ತಾನನು ಪೌಜುದಾರನಿಗೆ ಹೇಳುತ್ತಾ 'ನೀವು ಯಾರೂ ಕೂಡ ರಾಜ್ಯದ ಪ್ರಜೆಗಳ ಆಂತರಿಕ ವಿಷಯಗಳ ಮಧ್ಯೆ ಹಸ್ತಕ್ಷೇಪ ಮಾಡಬಾರದು. ಜೊತೆಗೆ ನಮ್ಮ ಅಧಿಕಾರಿಗಳು ಸಾಮಾನ್ಯ ಜನರ ಪ್ರಾಣಕ್ಕೆ ಕಂಟಕಪ್ರಾಯರಾಗದೆ, ಎಲ್ಲರ ಜೀವ ಮತ್ತು ಆಸ್ತಿಯನ್ನು ರಕ್ಷಿಸುವ ಕರ್ತವ್ಯದ ಕಡೆ ಗಮನಹರಿಸಬೇಕು' ಎಂದು ನಿರ್ದೇಶನವನ್ನು ನೀಡಿದ್ದನು. ಇದು ಮೇಲೆ ಉಲ್ಲೇಖಿಸಿದ ಈತನ ಮೌಲ್ಯಯುತ ಗುಣಗಳಿಗೆ ನಿದರ್ಶನವಾಗಿದೆ. ಇದಲ್ಲದೆ ಟಿಪ್ಪು ಸುಲ್ತಾನನು ತನ್ನ ಆಡಳಿತದಲ್ಲಿ ದಿನಂಪ್ರತಿ ಸುವ್ಯವಸ್ಥಿತವಾದ ಕಾರ್ಯನಿರ್ವಹಣೆಗೆ ಹಿಂದೂ ಧರ್ಮದ 'ಪಂಚಾಗ'ವನ್ನು ಅನುಸರಿಸುತ್ತಿದ್ದುದೂ ಉಂಟು. ಜೊತೆಗೆ ತನ್ನ ಕಾಲದಲ್ಲಿ ಮುದ್ರಿತವಾಗಿದ್ದ ತಾಮ್ರದ ನಾಣ್ಯದಲ್ಲಿ ಸಾಂಕೇತಿಕವಾಗಿ ಹಿಂದೂ ಧರ್ಮದ ಯುದ್ಧದ ಆನೆಯನ್ನು ಚಿತ್ರಿಸಿದ್ದನು.[17] ಮಾತ್ರವಲ್ಲದೆ ಶ್ರೀರಂಗಪಟ್ಟಣದ ಬೇಸಿಗೆ ಅರಮನೆ (ದರಿಯಾ ದೌಲತ್)ಯಲ್ಲಿನ ಗೋಡೆಯಲ್ಲಿ ಹಿಂದೂ ಧರ್ಮವನ್ನು ಪ್ರತಿನಿಧಿಸುವ ವೈದಿಕ ಕಾಲದ ಭಾಗವತ ಪುರಾಣದ ಲಿಪಿ, ಗೆರೆ ಮತ್ತು ಚಿತ್ರವನ್ನು ಕಾಣಬಹುದಾಗಿದೆ.[18]

ಟಿಪ್ಪುವು ತನ್ನ ಆಡಳಿತ ನಿರ್ವಹಣೆಯ ವಿಭಾಗಗಳಲ್ಲಿ ಬಹುತೇಕವಾಗಿ ಹಿಂದೂ ಧರ್ಮದ ಅಧಿಕಾರಿಗಳನ್ನು ನೇಮಿಸಿಕೊಂಡಿದ್ದನು. ರಾಜ್ಯಾಧಿಕಾರದ ದಿವಾನ ಪದವಿ, ಖಜಾನೆ, ಅಂಚೆ, ಪೊಲೀಸ್ ಭದ್ರತೆ, ಕಂದಾಯ ಇಲಾಖೆ, ನ್ಯಾಯಾಂಗ ವ್ಯವಸ್ಥೆಯನ್ನು ಬಹಳ ಸುಲಲಿತವಾಗಿ ಈ ಧರ್ಮದ ಬ್ರಾಹ್ಮಣ ಅಧಿಕಾರಿಗಳೇ ನಿರ್ವಹಿಸಿ ಸೈ ಎನಿಸಿಕೊಂಡಿದ್ದರು. ಅಂತಹವರಲ್ಲಿ ದಿವಾನ್ ಪೂರ್ಣಯ್ಯ, ಹರಿಸಿಂಗ್, ಕೃಷ್ಣಯ್ಯ, ಶಾಮಯ್ಯ ಅಯ್ಯಂಗಾರ್, ರಂಗಯ್ಯ ಅಯ್ಯಂಗಾರ್, ಮೂಲಚಂದ್, ಸುಜನ್‌ರಾಯ್, ಸುಬ್ಬಾರಾವ್, ಅಪ್ಪಾಜಿರಾವ್, ಶ್ರೀಪತ್‌ರಾವ್, ಮುಕುಂದರಾವ್ ಮುಂತಾದವರು ಪ್ರಮುಖರು.[19] ಅಲ್ಲದೆ ರಾಮಚಂದ್ರರಾವ್ ಎಂಬುವರು ಟಿಪ್ಪುವಿನ ಆಸ್ಥಾನದಲ್ಲಿ ಅಧಿಕಾರಿಯಾಗಿದ್ದುಕೊಂಡು ಕೋಟೆ ಮತ್ತು ಉದ್ಯಾನವನ್ನು ನೋಡಿಕೊಳ್ಳುತ್ತಿದ್ದರು.[20] ಈ ಬ್ರಾಹ್ಮಣವರ್ಗದ ಅಧಿಕಾರಿಗಳು ಶ್ರೀರಂಗಪಟ್ಟಣದಲ್ಲೇ ಉಳಿದು ಸುಸೂತ್ರವಾಗಿ ತಮ್ಮ ಕರ್ತವ್ಯವನ್ನು ನಿರ್ವಹಿಸಲು ಸಹಾಯಕವಾಗುವಂತೆ ಟಿಪ್ಪುವು ಅವರ ಕುಟುಂಬಗಳಿಗೆ ವಸತಿಗೃಹಗಳನ್ನು ವ್ಯವಸ್ಥೆ ಮಾಡಿದ್ದನು. ಈತನ ಮಿಲಿಟರಿ ಸೈನ್ಯದಲ್ಲಿ ಹಿಂದೂ ಸೈನಿಕರು ಕೂಡ ಕಾರ್ಯ ನಿರ್ವಹಿಸುತ್ತಿದ್ದರು.[21]

ಟಿಪ್ಪು ಸುಲ್ತಾನನು ಕೇಂದ್ರಸರ್ಕಾರದಲ್ಲಿ ಮಾತ್ರವಲ್ಲದೆ ಗ್ರಾಮಾಡಳಿತದಲ್ಲೂ ಕೂಡ ಹಿಂದೂ ಅಧಿಕಾರಿಗಳಿಗೆ ಮಹತ್ವಯುತವಾದ ಜವಾಬ್ದಾರಿಯನ್ನು ನೀಡಿದ್ದನು. ಅವರಲ್ಲಿ ಶೂದ್ರ ವರ್ಗದ ಗೌಡರು, ಬ್ರಾಹ್ಮಣ ಸಮುದಾಯದ ಶಾನುಭೋಗರು, ಶಿರಸ್ಥೇದಾರರು ಪ್ರಮುಖವಾಗಿದ್ದರು.[22] ಹೀಗೆ ಟಿಪ್ಪು ಹಿಂದೂ ಧರ್ಮಕ್ಕೆ ನೀಡಿದ ಪ್ರೋತ್ಸಾಹದಂತೆ ಕ್ರಿಶ್ಚಿಯನ್ ಧರ್ಮಕ್ಕೂ ಆದರತೆಯನ್ನು ತೋರಿದ್ದನು. ಈತ ಸಿರಿಯನ್ ಮತ್ತು ಆರ್ಮೇರಿಯನ್ ಕ್ರಿಶ್ಚಿಯನ್ನರ ಕುಂದುಕೊರತೆಗಳನ್ನು ನಿವಾರಿಸುವ ಕಡೆ ಕಾಳಜಿ

ವಹಿಸಿದ್ದನು.[23] ಧರ್ಮಾತೀತ ಪ್ರಜಾಕಲ್ಯಾಣ ಸೇವೆಯ ಜೊತೆಜೊತೆಗೆ ಶೃಂಗೇರಿ ಶಾರದಾ ಪೀಠಕ್ಕೆ ಟಿಪ್ಪು ನೀಡಿದ ಕೊಡುಗೆ ಅನನ್ಯ ಮತ್ತು ಅಜರಾಮರ.

- **ಶೃಂಗೇರಿಯ ಶಾರದಾ ಪೀಠಕ್ಕೆ ಟಿಪ್ಪು ಸುಲ್ತಾನನ ಕೊಡುಗೆಗಳು:**

8ನೇ ಶತಮಾನದಲ್ಲಿ ಅದ್ವೈತ ತತ್ವದ ಪ್ರವರ್ತಕ ಶಂಕರಚಾರ್ಯರಿಂದ ಶೃಂಗೇರಿಯಲ್ಲಿ ಶಾರದಾ ಪೀಠ ಸ್ಥಾಪಿಸಲ್ಪಟ್ಟಿತ್ತು. ಹೀಗಾಗಿ ಟಿಪ್ಪು ಸುಲ್ತಾನನೂ ಈ ಪೀಠದ ಜೊತೆ ಉತ್ತಮ ಸಂಬಂಧವನ್ನು ಹೊಂದಿದ್ದನು. ಜೊತೆಗೆ ಇಲ್ಲಿನ ದೈವಿಕ ಸಂಪ್ರದಾಯ, ಆಚರಣೆಗಳಿಗೆ ಟಿಪ್ಪು ಕಳಕಳಿಯುಕ್ತವಾದ ಪ್ರೋತ್ಸಾಹವನ್ನು ನೀಡಿದ್ದಾನೆ. ಇದಕ್ಕೆ ಆಧಾರ ಎಂಬಂತೆ ಒಟ್ಟು 29 ನಿರೂಪಗಳು ಅಥವಾ ಪತ್ರಗಳು ಲಭಿಸಿವೆ. ಈ ಪತ್ರಗಳನ್ನು 1916ರಲ್ಲಿ ಮೈಸೂರು ಪುರಾತತ್ವ ಇಲಾಖೆಯ ನಿರ್ದೇಶಕರಾಗಿದ್ದ ಆರ್. ನರಸಿಂಹಚಾರ್‌ರವರು ಶೋಧಿಸಿರುವರು..[24] ಈ ಪತ್ರಗಳು ಟಿಪ್ಪುವು ಶೃಂಗೇರಿ ಶಾರದಪೀಠದ ಮೇಲೆ ಹೊಂದಿದ್ದ ಗೌರವಯುತ ಭಾವನೆ, ಶ್ರದ್ಧೆಗಳಿಗೆ ಪ್ರತೀಕವಾಗಿವೆ. ಟಿಪ್ಪುವು ಕ್ರಮವಾಗಿ 1791 ರಿಂದ 1798ರವರೆಗೂ ಶೃಂಗೇರಿಯ ಮಠಾಧೀಶರಾಗಿದ್ದ ಸಚ್ಚಿದಾನಂದ ಭಾರತಿ ಸ್ವಾಮೀಜಿಗಳ ಜೊತೆ ಕನ್ನಡ ಭಾಷೆಯಲ್ಲಿ ಪತ್ರ ವ್ಯವಹಾರ ಮಾಡಿದ್ದನು. ಇವುಗಳಲ್ಲಿ 1791ರ ಪತ್ರ ಒಂದು ಘಟನೆಯನ್ನು ವಿವರಿಸಿದೆ.

ಅದೇನೆಂದರೆ, 1791ರಲ್ಲಿ ಮರಾಠರ ಸೇನೆಯ ಪಿಂಡಾರೆಗಳು ಪರಶುರಾಮ್ ಭಾವೂನ ನೇತೃತ್ವದಲ್ಲಿ ಶೃಂಗೇರಿಯ ಶಾರದಾ ಪೀಠದ ಮೇಲೆ ದಾಳಿ ಮಾಡಿದ್ದರು.. ಈ ಸಂದರ್ಭದಲ್ಲಿ ಶಾರದಾಂಬೆಯ ದೇವಾಲಯವನ್ನು ವಿಘ್ನಗೊಳಿಸಿದರಲ್ಲದೆ, ಮೌಲ್ಯಯುತ ಆಭರಣಗಳನ್ನು ದರೋಡೆ ಮಾಡಿದ್ದರು. ಜೊತೆಗೆ ಶಾರದಾ ಮೂರ್ತಿಯನ್ನು ಭಗ್ನಗೊಳಿಸಿ ಮತ್ತೊಂದು ಕಡೆಗೆ ಸ್ಥಳಾಂತರಿಸಿದ್ದರು. ಹೀಗಾಗಿ ಇದರ ಪರಿಣಾಮ ಮಠಕ್ಕೆ ಒಟ್ಟು 60ಲಕ್ಷ ರೂಪಾಯಿ ನಷ್ಟವಾಗಿತ್ತು. ಮಾತ್ರವಲ್ಲದೆ ಮರಾಠ ಸೈನಿಕರಿಂದ ಮಠದ ಕೆಲವು ಬ್ರಾಹ್ಮಣರು ಹತ್ಯೆಯಾಗಿದ್ದರೆ, ಹಲವಾರು ಮಂದಿ ಮಾರಣಾಂತಿಕ ಹಲ್ಲೆಗೊಳಗಾಗಿದ್ದರು. ಈ ಘಟನೆಯಿಂದ ಬಹಳವಾಗಿ ನೊಂದಿದ್ದ ಸ್ವಾಮೀಜಿಯವರು ಪತ್ರದ ಮೂಲಕ ಟಿಪ್ಪುವಿಗೆ ಆದ ಅವಗಡವನ್ನು ವಿವರಿಸಿ ನೆರವನ್ನು ಬಯಸಿದ್ದರು. ಇದಕ್ಕೆ ತಕ್ಷಣ ಪ್ರತಿಕ್ರಿಯಿಸಿ ಸ್ಪಂದಿಸಿದ ಟಿಪ್ಪು ಶಾರದಾಂಬೆ ಮೂರ್ತಿಯನ್ನು ಪುನರ್ ಪ್ರತಿಷ್ಠಾಪಿಸಿದನು. ಜೊತೆಗೆ ನಷ್ಟಗೊಂಡಿದ್ದ ಹಣ, ದವಸ, ಧಾನ್ಯ, 2 ಪಲ್ಲಕ್ಕಿಗಳು, ಆನೆ, ಕುದುರೆಗಳು, ತೊಡಲು ಬಟ್ಟೆ, ಸ್ವಾಮೀಜಿಗೆ ಶಾಲುಗಳನ್ನು ಬಿದನೂರಿನ ಆಸಫ್‌ನ ನೇತೃತ್ವದಲ್ಲಿ ಒದಗಿಸುವಲ್ಲಿ ಪ್ರಮುಖ ಪಾತ್ರವಹಿಸಿದನು.

ಇದಾದ ನಂತರ ಮಠದ ಸ್ವಾಮೀಜಿಗಳು 1792ರಲ್ಲಿ ಟಿಪ್ಪುವಿಗೆ ಮತ್ತೊಂದು ಪತ್ರದಲ್ಲಿ 48 ದಿನಗಳ 'ಸಹಸ್ರ ಚಂಡಿ ಹೋಮ'ಕ್ಕೆ ಆಹ್ವಾನಿಸಿದ್ದರು. ಆಗ ಟಿಪ್ಪು ಇದಕ್ಕೆ ಒಪ್ಪಿಕೊಂಡು ಈ ಹೋಮಕ್ಕೆ ಯಾವುದೇ ತೊಂದರೆಯಾಗದಂತೆ ಮುತುವರ್ಜಿ ವಹಿಸಿ ನೋಡಿಕೊಳ್ಳಲು ಕೊಪ್ಪ ಹೋಬಳಿಯ ಅಮೀಲ್ದಾರ ತ್ರಯಂಬಕರಾವ್‌ಗೆ ತಿಳಿಸಿದ್ದನು.[25] ಜೊತೆಗೆ ಆ ಹೋಮದಲ್ಲಿ ತಾನೂ ಪಾಲ್ಗೊಂಡು

ಸ್ವತಂತ್ರ್ಯ ರಾಜ್ಯ ವಿರೋಧಿ ಶತ್ರುಗಳ ವಿನಾಶ ಮತ್ತು ಪ್ರಜಾಹಿತಕ್ಕಾಗಿ ಪ್ರಾರ್ಥಿಸಿದ್ದನು. ಅಲ್ಲದೆ ಸ್ವಾಮೀಜಿಗೂ ಪ್ರಾರ್ಥಿಸುವಂತೆ ಕೇಳಿಕೊಂಡಿದ್ದನು. ಟಿಪ್ಪುವಿಗೆ ಹಿಂದೂ ಜ್ಯೋತಿಷಿಗಳ ಹೋಮಹವನಗಳ ಮೇಲೆ ಅಪಾರ ನಂಬಿಕೆ ಇತ್ತು. ಹೀಗಾಗಿ 4ಮೇ, 1799ರಲ್ಲಿ ತನ್ನ ಅಂತಿಮದಿನದ ಯುದ್ಧ ಮಾಡುವ ಮುಂಚೆ ಮೃತ್ಯುಂಜಯ ಹೋಮವನ್ನು ಮಾಡಿಸಿದ್ದನು.[26] ಇದು ಈತನ ಹಿಂದೂ ಧರ್ಮದ ಮೇಲಿಟ್ಟಿದ್ದ ನಂಬಿಕೆ ಮತ್ತು ವಿಶ್ವಾಸದ ಗುರುತಾಗಿತ್ತು. ಹೀಗೆ ಟಿಪ್ಪು ಸುಲ್ತಾನನು ಹೃದಯ ವೈಶಾಲ್ಯತೆಯ ಧರ್ಮ ಸಹಿಷ್ಣುವಾಗಿ ಕರ್ನಾಟಕ ಇತಿಹಾಸಕ್ಕೆ ಕೊಡುಗೆಗಳನ್ನು ನೀಡಿದ್ದರೂ ಸಹ ಆಧಾರರಹಿತ ಆರೋಪಗಳಿಂದ ಮುಕ್ತನಾಗಿಲ್ಲ. ಈತನನ್ನು ಕೆಲವು ಬ್ರಿಟಿಷ್ ಬರಹಗಾರರು 'ಮತಾಂಧ', 'ಧರ್ಮಾಂಧ' ಎಂದು ವಕ್ರದೃಷ್ಟಿಯಲ್ಲಿ ಆಪಾದಿಸಿದ್ದಾರೆ.

- **ಬ್ರಿಟಿಷ್ ಕಾಲದ ಬರಹಗಾರರ ಏಕಮುಖ ದೃಷ್ಟಿಯಲ್ಲಿ ಧರ್ಮಾಂಧನಾಗಿ ಟಿಪ್ಪು ಸುಲ್ತಾನ್:**

ಟಿಪ್ಪು ಸುಲ್ತಾನ್ ಒಬ್ಬ ಧರ್ಮಾಂಧ ಎಂಬ ಹಣೆಪಟ್ಟಿಯನ್ನು ಕಟ್ಟಿದವರು ಹಾಗೂ ಈತನ ಇತಿಹಾಸವನ್ನು ಮೊಟ್ಟಮೊದಲ ಬಾರಿಗೆ ರಚಿಸಿದವರು ಬ್ರಿಟಿಷ್ ಇತಿಹಾಸಕಾರರೆಂಬುದನ್ನು ಮರೆಯಬಾರದು. ಇವರಲ್ಲಿ ಕೆಲವರು ಈತನನ್ನು ಧರ್ಮಾಂಧ, ಪ್ರಜಾಪೀಡಕ, ಹಿಂದೂ ವಿರೋಧಿ ನೀತಿಯ ಪ್ರತಿಪಾದಕ, ಬಲವಂತವಾಗಿ ಹಿಂದೂಗಳನ್ನು ಮತಾಂತರ ಮಾಡಿದ ಮತೀಯವಾದಿ, ದೇವಾಲಯ ಮತ್ತು ಚರ್ಚ್‌ಗಳ ವಿನಾಶಕ, ಮತಾಂಧ ಎಂದು ತಮ್ಮ ಗ್ರಂಥಗಳಲ್ಲಿ ಉಲ್ಲೇಖಿಸಿದ್ದಾರೆ.[27] ಅಂತಹವರಲ್ಲಿ ಮಾರ್ಕ್ ಕೊಲೊನೆಲ್ ವಿಲ್ಕ್ಸ್ ('ಹಿಸ್ಟಾರಿಕಲ್ ಸ್ಕೆಚಸ್ ಆಫ್ ದ ಸೌತ್ ಆಫ್ ಇಂಡಿಯಾ ಇನ್ ಆನ್ ಅಟೆಂಪ್ಟ್ ಟು ಟ್ರೇಸ್ ದ ಹಿಸ್ಟರಿ ಆಫ್ ಮೈಸೂರ್'), ವಿಲಿಯಂ ಕಿರ್ಕ್ ಪ್ಯಾಟ್ರಿಕ್ ('ಸೆಲೆಕ್ಟ್ ಲೆಟರ್ಸ್ ಆಫ್ ಟಿಪ್ಪು ಸುಲ್ತಾನ್'), ಅಲೆಗ್ಸಾಂಡರ್ ಬೀಟ್ಸನ್ ('ಎ ವೀವ್ ಆಫ್ ದ ಒರಿಜಿನ್ ಅಂಡ್ ಕಂಡಕ್ಟ್ ಆಫ್ ದ ವಾರ್ ವಿತ್ ಟಿಪ್ಪು ಸುಲ್ತಾನ್'), ಮೆಲ್ಲೆಸನ್ ('ಶ್ರೀರಂಗಪಟ್ಟಣ, ದ ಕ್ಯಾಪಿಟಲ್ ಸಿಟಿ ಆಫ್ ಟಿಪ್ಪು') ಮುಂತಾದವರು ಪ್ರಮುಖರು.[28]

ಇದು ಇವರುಗಳ ಪೂರ್ವಾಗ್ರಹ ಆಲೋಚನೆಯಾಗಿದ್ದು ಬ್ರಿಟಿಷರ ಒಡೆದು ಆಳುವ ನೀತಿಯನ್ನು ಪ್ರತಿಪಾದಿಸಿರುವ ಪ್ರತಿನಿಧಿಗಳಾಗಿದ್ದಾರೆ. ಆದರೆ ಇವರುಗಳ ಈ ರೀತಿಯ ಹೇಳಿಕೆಯನ್ನು ಒಪ್ಪುವುದಾದರೆ ಟಿಪ್ಪು ಸುಲ್ತಾನನ ಸಾಮರಸ್ಯಯುತವಾದ ಧಾರ್ಮಿಕ ನೀತಿಗೆ ಮಸಿ ಲೇಪಸಿದಂತಾಗುತ್ತದೆ. ಏಕೆಂದರೆ ಟಿಪ್ಪು ಅನ್ಯ ಧರ್ಮ ವಿರೋಧಿತನದ ಸಂಕುಚಿತ ಮನಸ್ಸನ್ನು ಹೊಂದಿದ್ದರೆ, ತನ್ನ ಆಡಳಿತ ನಿರ್ವಹಣೆಯ ಅನುಕೂಲಕ್ಕಾಗಿ ನೇಮಿಸಿಕೊಂಡಿದ್ದ ದಿವಾನ್ ಪೂರ್ಣಯ್ಯರವರ ಆದಿಯಾಗಿ ಎಲ್ಲಾ ಹಿಂದೂ ಧರ್ಮೀಯ ಅಧಿಕಾರಿಗಳನ್ನು ಬಲವಂತವಾಗಿಯಾದರೂ ಮತಾಂತರ ಮಾಡಬೇಕಿತ್ತು. ಅಥವಾ ಇದಕ್ಕೆ ಒಪ್ಪದಿದ್ದರವರನ್ನೂ ಸಹ ಉಗ್ರವಾದ ಶಿಕ್ಷೆಗೆ ಗುರಿಪಡಿಸಬೇಕಿತ್ತು. ಆದರೆ ಇದಾವುದೂ ನಡೆದಿರದ ಹಿನ್ನಲೆಯಲ್ಲಿ ಆರಂಭದ ಈ ಬ್ರಿಟಿಷ್ ಬರಹಗಾರರ ಹೇಳಿಕೆಗಳು ಟಿಪ್ಪುವಿನ ಧಾರ್ಮಿಕ ಸಹಿಷ್ಣುತೆಯ

ಆದರತೆಗೆ ಅಪಕೀರ್ತಿ ತರಲು ಎಣೆದ ಕಥೆಯಾಗಿದೆ ಎಂದು ಹೇಳಬಹುದು. ಇದಕ್ಕೆ ಪೂರಕವಾಗಿ ಕೆಲವು ಪ್ರಗತಿಗಾಮಿ ಬ್ರಿಟಿಷ್ ಬರಹಗಾರರನ್ನೊಳಗೊಂಡಂತೆ ಹಲವಾರು ಭಾರತೀಯ ಇತಿಹಾಸಕಾರರು ಟಿಪ್ಪುವಿನ ಮೇಲಿನ ಧರ್ಮವಿರೋಧಿ ಆಪಾದನೆಯನ್ನು ಅಲ್ಲಗೆಳೆದಿದ್ದಾರೆ. ಅವರುಗಳಲ್ಲಿ ಎಡ್ವರ್ಡ್ ಮೂರ್, ಮೇಜರ್ ಡಿರಾಮ್, ಜಾನ್ ಷೋರ್, ಎ.ಎಸ್. ಚಟ್ಟಿಯಾರ್, ಇರ್ಫಾನ್ ಹಬೀಬ್, ಮೊಹಿಬುಲ್ ಹಸನ್, ಬಿ.ಎ. ಸಾಲೆತೊರೆ, ಹಯವದನರಾವ್ ಸಿ. ಮುಂತಾದವರು ಟಿಪ್ಪುವಿನ ಕಾಲದ ಪ್ರಾಥಮಿಕ ಆಧಾರಗಳನ್ನು ಸಂಶೋಧನೆ ಮಾಡುವುದರ ಮೂಲಕ ಕೂಲಂಕಶವಾಗಿ ಪರಿಶೀಲಿಸಿ ಟಿಪ್ಪು ಸುಲ್ತಾನನನ್ನು 'ಧರ್ಮಾಂಧ' ಎಂಬ ಸುಳ್ಳು ಆಪಾದನೆಯಿಂದ ಹೊರತಂದಿದ್ದಾರೆ.

ಇವರುಗಳ ಸಂಶೋಧನೆಯ ಬರಹಗಳ ಪ್ರಕಾರ ಟಿಪ್ಪು ಸುಲ್ತಾನನ ಜೊತೆಯಲ್ಲಿಯೇ ಇದ್ದುಕೊಂಡು ಬ್ರಿಟಿಷರಿಗೆ ಪಿತೂರಿಯುತ ಸಾಮ್ರಾಜ್ಯಶಾಹಿತ್ವದ ಬಲೆಯನ್ನು ಎಣೆಯಲು ಕೆಲವು ಸ್ಥಳೀಯರು ದಾರಗಳಾಗಿ ಮೀರ್ ಸಾದಿಕ್ ಕೆಲಸ ಮಾಡಿದ್ದರು. ಅವರುಗಳಲ್ಲಿ  ಕೂರ್ಗ್‌ನ ಭೂಮಾಲೀಕರು, ಮಲಬಾರಿನ ಶ್ರೀಮಂತ ಜಮೀನ್ದಾರರು, ಮಂಗಳೂರಿನ ಕ್ಯಾಥೋಲಿಕ್ ಕ್ರಿಶ್ಚಿಯನ್ನರುಗಳು, ಮಾಪಿಳ್ಳೆ ಮುಸ್ಲೀಮರುಗಳು, ಸವಣೂರಿನ ಮಹದವಿ ಮುಸ್ಲೀಮರುಗಳು ಪ್ರಮುಖರು. ಇವರು ಟಿಪ್ಪುವಿನ ಜನಪರ ಆಡಳಿತದಲ್ಲಿ ರಾಜದ್ರೋಹ ಎಸಗಿ, ಈತನ ರಾಜಕೀಯ ಅಸ್ತಿತ್ವವನ್ನೇ ಬುಡಮೇಲು ಮಾಡಲು ಬ್ರಿಟಿಷರ ದಾಸರು, ಗುಲಾಮರಾಗಿ ಹೊಂಚುಹಾಕುತ್ತಿದ್ದರು. ಇದನ್ನು ಪ್ರತ್ಯಕ್ಷವಾಗಿ ಕಂಡ ಟಿಪ್ಪು ಇವರನ್ನು ಹಿಂದೂ–ಮುಸ್ಲೀಮರೆನ್ನದೆ ಕರುಣಾಹೀನವಾಗಿ ಹಿಂಸಿಸಿದ್ದಾನೆ ಎಂದು ತಿಳಿಸಿದ್ದಾರೆ. ಇದು ನಿಜಕ್ಕೂ ಒಪ್ಪಬೇಕಾದ ಅಂಶವೇ ಆಗಿದೆ. ಯಾವುದೇ ರಾಜಪ್ರಭುತ್ವದಲ್ಲೇ ಆಗಲಿ ನಂಬಿದವರೂ ರಾಜನಿಗೆ ತಮ್ಮ ವ್ಯಕ್ತಿಗತ ಹಿತಕ್ಕೆ ಒತ್ತುಕೊಟ್ಟು ಪರರು ತೋರುವ ಆಸೆಆಮಿಷ, ಅಧಿಕಾರ ವ್ಯಾಮೋಹ, ಹಣದಾಹಕ್ಕೆ ಒಳಗಾಗಿ ಆಶ್ರಯದಾತನ ಬೆನ್ನಿಗೆ ಚೂರಿ ಹಾಕಲು ಯತ್ನಿಸಿದಾಗ ಇದನ್ನು ತಿಳಿದ ಅರಸನಿಗೆ ಸಹಿಸಿಕೊಳ್ಳಲು ಸಾಧ್ಯವೇ?. ಇದು ಟಿಪ್ಪುವಿನ ಆಡಳಿತದಲ್ಲಿ ಕಹಿ ಘಟನೆಯಾಗಿ ಸಂಭವಿಸಿದೆ. ಯಾರೇ ಆಗಲಿ ಟಿಪ್ಪುವಿನ ನಂಬಿಕೆಗೆ ಅವಿಧೇಯವಾಗಿ ನಡೆದುಕೊಂಡರೆಂದರೆ ಅವರಿಗೆ ಧರ್ಮರಹಿತವಾಗಿ ಉಗ್ರಶಿಕ್ಷೆಯೇ ಕಾದಿರುತ್ತಿತ್ತು. ಹೀಗಾಗಿ ಟಿಪ್ಪು ಸುಲ್ತಾನ್ ಈ ಹಿನ್ನಲೆಯಲ್ಲಿ ಉಗ್ರವಾಗಿ ನಡೆದುಕೊಂಡಿದ್ದಾನೆಯೇ ಹೊರತು 'ಧರ್ಮಾಂಧ'ನಾಗಿದ್ದನೆಂದು ಒಪ್ಪುವುದು ಸತ್ಯಕ್ಕೆ ದೂರದ ಮಾತಾಗಿದೆ.[29]

- **ಪರಿಸಮಾಪ್ತಿ:**

ಯಾವುದೇ ಸಂದರ್ಭದಲ್ಲಾಗಲಿ ಎಲ್ಲರ ಮನಸ್ಸಿನಲ್ಲಿ ಸ್ಥಾನವನ್ನು ಪಡೆದಿರುವ ಒಬ್ಬ ಐತಿಹಾಸಿಕ ವ್ಯಕ್ತಿಯನ್ನು ಪೂರ್ವಾಗ್ರಹ ಭಾವನೆಯಿಂದ ನೋಡುವುದಾಗಲಿ, ಜಾತಿ, ಧರ್ಮದ ಹಿನ್ನಲೆಯಲ್ಲಿ ದ್ವೇಷವನ್ನು ಕಾರುವುದಾಗಲಿ ಮಾಡಲೇಬಾರದು. ಆತನ ಪ್ರಜಾಪರ ಸಾಧನೆಗಳನ್ನು ಆಧಾರಗಳ

ಸಮೇತವಾಗಿ ಪರಿಶೀಲಿಸಿ ಆರೋಗ್ಯಕರವಾದ ಚರ್ಚೆಗೆ ಒಳಪಡಿಸಿದಾಗ ಅದರ ಆಂತರ್ಯದಲ್ಲಿರುವ ಸತ್ಯ ತಿಳಿದು ಆ ವ್ಯಕ್ತಿಯ ನೈಜ ವ್ಯಕ್ತಿತ್ವದ ಪುಟಗಳು ತೆರೆದುಕೊಳ್ಳುತ್ತದೆ. ಯಾವುದು ಸತ್ಯ, ಯಾವುದು ಸುಳ್ಳು ಎಂಬುದು ಬಟಬಯಲಾಗುತ್ತದೆ. ಈ ಅಭಿಮತ ಪ್ರಸ್ತುತ ಸಂದರ್ಭದಲ್ಲಿ ಧಾರ್ಮಿಕ ಸಹಿಷ್ಣುತೆಗೆ ಹೆಸರಾಗಿದ್ದ ಟಿಪ್ಪು ಸುಲ್ತಾನನಿಗೆ ಅನ್ವಯಿಸುತ್ತದೆ.

ಏಕೆಂದರೆ ಟಿಪ್ಪು ಸುಲ್ತಾನನು ಈಗಾಗಲೇ ತಿಳಿಸಿರುವಂತೆ ಶಿಕ್ಷಣದಲ್ಲಿ ಉನ್ನತಮಟ್ಟದ ವಿದ್ಯಾರ್ಜನೆಯನ್ನು ಗಳಿಸಿಕೊಂಡು ಸರ್ವಕ್ಷೇತ್ರಗಳಲ್ಲಿ ದೇಶದ ಏಳಿಗೆ, ಜನಸಾಮಾನ್ಯರ ಸಂರ್ವಾಗೀಣ ಅಭಿವೃದ್ಧಿ ಮತ್ತು ಸಾಮಾಜಿಕ, ಧಾರ್ಮಿಕ ಕ್ಷೇತ್ರಗಳಲ್ಲಿ ಸಮಾನವಾದ ಸುಧಾರಣೆಯನ್ನು ಬಯಸುತ್ತಿದ್ದವನು. ಇದನ್ನು ಕುರಿತಾಗಿ ಇಷ್ಟು ಮಟ್ಟದ ಪುರಾವೆಗಳು ಈತನ ಸಾಧನೆಗಳನ್ನು ಸಾಬೀತುಪಡಿಸಿದ್ದರೂ ಕೂಡ ಇಂದು ಕೆಲವು ಮತೀಯವಾದಿ ಮನಸ್ಸುಗಳು, ರಾಜಕೀಯ ಪಕ್ಷಗಳ ನಾಯಕರು ಟಿಪ್ಪು ಸುಲ್ತಾನನನ್ನು ಒಬ್ಬ ಮತಾಂಧ, ಹಿಂದೂ ವಿರೋಧಿ ಎಂದು ಬಹಿರಂಗ ಹೇಳಿಕೆಗಳನ್ನು ನೀಡುತ್ತಿದ್ದಾರೆ. ಅಲ್ಲದೆ ಈತ ಕನ್ನಡನಾಡಿನ ಕುಡಿ ಎಂಬುದನ್ನು ಪರಿಗಣಿಸಿದೆ ಎಲ್ಲರ ಸಮ್ಮುಖದಲ್ಲಿ ದುಷ್ಟನಾಗಿ ಬಿಂಬಿಸಿ, ಆತನ ಶಿಷ್ಟಾಚಾರದ ಮೌಲ್ಯಯುತ ಗುಣ ಮತ್ತು ಆಧುನಿಕತೆಯ ಸಮಾಜ ನಿರ್ಮಾಣದ ಪ್ರವೀಣತೆಯನ್ನು ಮರೆತು ಅಪ್ರಜ್ಞಾವಂತರ ಹಾಗೆ ವರ್ತಿಸುತ್ತಿದ್ದಾರೆ. 19ನೇ ಶತಮಾನದ ಆರಂಭದಲ್ಲಿ ಸ್ವಾತಂತ್ರ್ಯಕ್ಕಾಗಿ ಬ್ರಿಟಿಷರ ವಿರುದ್ಧ ಕಿತ್ತೂರು ರಾಣಿ ಚೆನ್ನಮ್ಮಳು ಹೋರಾಡುವ ಮುಂಚೆಯೇ ಗಂಡೆದೆಯಿಂದ ಬ್ರಿಟಿಷರ ಸೈನ್ಯಕ್ಕೆ ಸೆಡ್ಡು ಒಡೆದು ಹುಲಿಯಂತೆ ಹೋರಾಡಿ ದೇಶದಿಂದಲೇ ಇವರನ್ನು ಮೂಲೋಚ್ಚಾಟನೆ ಮಾಡಲು ಮುಂದಾದ ಧೀರ ಟಿಪ್ಪು ಸುಲ್ತಾನ್ ಆಗಿದ್ದಾನೆ. ಇಷ್ಟಿದ್ದರೂ ಇವನನ್ನು ಪರದೇಶೀಯ ಎಂಬಂತೆ ತಾರತಮ್ಯ ಭಾವನೆಯಲ್ಲಿ ಕಂಡು ಆತನ ಮೇಲೆ ಇಲ್ಲಸಲ್ಲದ ಆರೋಪಗಳನ್ನು ಮಾಡುತ್ತಾ, ರಾಜ್ಯದಲ್ಲಿ ಬಹುಸಂಖ್ಯಾತ ಹಿಂದೂ ಸಮುದಾಯಗಳ ಮತಬ್ಯಾಂಕಿಗಾಗಿ ಮುಸ್ಲೀಂ ವಿರೋಧಿ ನೀತಿಯನ್ನು ಅನುಸರಿಸುತ್ತಿರುವುದು ಪ್ರತಿಗಾಮಿ ನೀತಿಯ ರಾಜಕಾರಣಿಗಳ ಮೂರ್ಖತನದ ಪರಮಾವಧಿಯಾಗಿದೆ. ಇದರಿಂದಾಗಿ ಶ್ರೀರಂಗಪಟ್ಟಣದಲ್ಲಿ ಸ್ಥಾಪಿಸಲುದ್ದೇಶಿಸಿದ್ದ 'ಕೇಂದ್ರೀಯ ವಿಶ್ವವಿದ್ಯಾಲಯ'ದ ಸಂಕೀರ್ಣ ಹಾಗೂ ಬಹುಶಃ 2015ನೇ ಸಾಲಿನಿಂದ ರಾಜ್ಯದಾದ್ಯಂತ ಪ್ರಾರಂಭಿಸಲಾಗಿದ್ದ 'ಟಿಪ್ಪು ಸುಲ್ತಾನ್ ಜಯಂತಿ'ಗಳೆರಡನ್ನು ಕಾರ್ಯರೂಪಕ್ಕೆ ತರದೆ ಪ್ರಸ್ತುತ ಮೂಲೆಗುಂಪು ಮಾಡಿರುವುದು ಇದರ ಕಾರಣಕರ್ತರು ಎಸಗಿರುವ ತಲೆತಗ್ಗಿಸುವ ಪ್ರಮಾದವಾಗಿದೆ. ಟಿಪ್ಪು ವಿರೋಧಿ ನೀತಿಯನ್ನು ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿನ ಆಡಳಿತ ಪಕ್ಷಗಳು ಹೀಗೆಯೇ ಮುಂದುವರಿಸಿದರೆ ಮುಂದೆ ಆಗಬಹುದಾದ ರಣಭೀಕರ ಕೋಮುಘರ್ಷಣೆಗೆ ಕಾರಣರಾಗಬೇಕಾಗುತ್ತದೆ. ಹೀಗಾಗಿ ಭಾರತದ ಸಂವಿಧಾನದ 'ಸರ್ವರಿಗೂ ಸಮಪಾಲು ಸರ್ವರಿಗೂ ಸಮಬಾಳು' ಎಂಬ

ತತ್ವದಡಿಯಲ್ಲಿ ಏಕರೂಪದ ಆಡಳಿತವನ್ನು ನಡೆಸಬೇಕಾದ ಅನಿವಾರ್ಯತೆ ಇವರ ಎದುರಿಗಿದೆ ಎಂದು ಈ ಸಂದರ್ಭದಲ್ಲಿ ಹೇಳಬಹುದು.

## ಕೊನೆಟಿಪ್ಪಣಿಗಳು:

1. ಬಿ. ಷೇಕ್ ಅಲಿ, ರಾಷ್ಟ್ರೀಯ ಜೀವನ ಚರಿತ್ರೆ ಮಾಲೆ, ಟಿಪ್ಪು ಸುಲ್ತಾನ್, ನ್ಯಾಷನಲ್ ಬುಕ್ ಟ್ರಸ್ಟ್, ಇಂಡಿಯಾ, 1979, ಪುಟ70–71.
2. Souvenir, Seminar on National Integration with Special Reference to Tipu Sultan, Paper Presentor- M.B. Rajamami, Paper-Tipu Sultan and Egalitarianism, Organised by Department of Studies in History, University of Mysore, Manasagangotri, Mysore, 23-24 September, 1989, Pp116.
3. Ibid….., Pp122.
4. ಪ್ರಧಾನ ಸಂಪಾದಕರು– ಬಾ.ರಾ. ಗೋಪಾಲ್, ಎಪಿಗ್ರಾಫಿಯ ಕರ್ನಾಟಿಕ, ಸಂಪುಟ6, ಮಂಡ್ಯ ಜಿಲ್ಲೆ, ಶ್ರೀರಂಗಪಟ್ಟಣ ಶಾಸನಗಳ ಸಂಖ್ಯೆ 12, 13, 14, 16, ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ, 1977, ಪುಟ 607–608.
5. ಬಿ. ಷೇಕ್ ಅಲಿ, ರಾಷ್ಟ್ರೀಯ ಜೀವನ ಚರಿತ್ರೆ ಮಾಲೆ, ಟಿಪ್ಪು ಸುಲ್ತಾನ್, ನ್ಯಾಷನಲ್ ಬುಕ್ ಟ್ರಸ್ಟ್, ಇಂಡಿಯಾ, 1979, ಪುಟ72.
6. ಪ್ರಧಾನ ಸಂಪಾದಕರು– ಬಾ.ರಾ. ಗೋಪಾಲ್, ಎಪಿಗ್ರಾಫಿಯ ಕರ್ನಾಟಿಕ, ಸಂಪುಟ6, ಮಂಡ್ಯ ಜಿಲ್ಲೆ, ಶ್ರೀರಂಗಪಟ್ಟಣ ಶಾಸನಗಳ ಸಂಖ್ಯೆ 171 ಮತ್ತು 197, ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ, 1977, ಪುಟ252 ಮತ್ತು 261–262.
7. Souvenir, Seminar on National Integration with Special Reference to Tipu Sultan, Paper Presentor- K.S. Shivanna, Paper-Tipu Sultan’s policy Towards Two Hindu Religious Establishments: Sringeri and Melukote, Organised by Department of Studies in History, University of Mysore, Manasagangotri, Mysore, 23-24 September, 1989, Pp84.

8. ಪ್ರಧಾನ ಸಂಪಾದಕರು– ಬಾ.ರಾ. ಗೋಪಾಲ್, ಎಪಿಗ್ರಾಫಿಯ ಕರ್ನಾಟಿಕ, ಸಂಪುಟ 7, ಮಂಡ್ಯ ಜಿಲ್ಲೆ, ಮಳವಳ್ಳಿ, ಶಾಸನಗಳ ಸಂಖ್ಯೆ 38, ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ, 1979, ಪುಟ368.
9. ಸಂಪಾದಕರು– ಹಂ.ಗು. ರಾಜೇಶ್, ಇತಿಹಾಸ ದರ್ಪಣ(ತ್ರೈಮಾಸಿಕ) ಚರಿತ್ರಾಸಕ್ತರ ಅಂಕಣ, ಲೇಖಕರು–ಶಿವಕುಮಾರಿ ಎಂ.ಎಸ್., ಲೇಖನ–ಶಾಸನಗಳ ಹಿನ್ನೆಲೆಯಲ್ಲಿ ಟಿಪ್ಪು ಸುಲ್ತಾನ್, ಅಕ್ಟೋಬರ್–ಡಿಸೆಂಬರ್ 2012, ಪುಟ46.
10. ಬಿ. ಷೇಕ್ ಅಲಿ, ರಾಷ್ಟ್ರೀಯ ಜೀವನ ಚರಿತ್ರೆ ಮಾಲೆ, ಟಿಪ್ಪು ಸುಲ್ತಾನ್, ನ್ಯಾಷನಲ್ ಬುಕ್ ಟ್ರಸ್ಟ್, ಇಂಡಿಯಾ, 1979, ಪುಟ72.
11. Souvenir, Seminar on National Integration with Special Reference to Tipu Sultan, Paper Presentor- , D.A. Girijamma, Paper-Pacche Linga Matu Pacche Haara, Organised by Department of Studies in History, University of Mysore, Manasagangotri, Mysore, 23-24 September, 1989, Pp133.
12. ಪ್ರಧಾನ ಸಂಪಾದಕರು– ಬಾ.ರಾ. ಗೋಪಾಲ್, ಎಪಿಗ್ರಾಫಿಯ ಕರ್ನಾಟಿಕ, ಸಂಪುಟ 3, ಮೈಸೂರು ಜಿಲ್ಲೆ, ನಂಜನಗೂಡು, ಶಾಸನಗಳ ಸಂಖ್ಯೆ 362 ಮತ್ತು 363, ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ, 1974, ಪುಟ411–412.
13. Souvenir, Seminar on National Integration with Special Reference to Tipu Sultan, Paper Presentor- M.B. Rajamami, Paper-Tipu Sultan and Egalitarianism, Organised by Department of Studies in History, University of Mysore, Manasagangotri, Mysore, 23-24 September, 1989, Pp121.
14. Ibid….., Pp122.
15. ಬಿ. ಷೇಕ್ ಅಲಿ, ರಾಷ್ಟ್ರೀಯ ಜೀವನ ಚರಿತ್ರೆ ಮಾಲೆ, ಟಿಪ್ಪು ಸುಲ್ತಾನ್, ನ್ಯಾಷನಲ್ ಬುಕ್ ಟ್ರಸ್ಟ್, ಇಂಡಿಯಾ, 1979, ಪುಟ72.
16. Souvenir, Seminar on National Integration with Special Reference to Tipu Sultan, Paper Presentor- M.B. Rajamami, Paper-Tipu Sultan and Egalitarianism, Organised by Department of Studies in History,

University of Mysore, Manasagangotri, Mysore, 23-24 September, 1989, Pp122.

17. Souvenir, Seminar on National Integration with Special Reference to Tipu Sultan, Paper Presentor- Syed Azam, Paper-Religious Policy of Tipu Sultan: An Essay in Interpretation, Organised by Department of Studies in History, University of Mysore, Manasagangotri, Mysore, 23-24 September, 1989, Pp91.
18. Janaki Nair, Mysore Modern Rethinking the Region under Princely Rule, Orient Blackswan Pvt. Ltd, New Delhi, 2012, Pp80.
19. Google chrone, Tipu Sultan Wekipedia.
20. Janaki Nair, Mysore Modern Rethinking the Region under Princely Rule, Orient Blackswan Pvt. Ltd, New Delhi, 2012, Pp33.
21. Google chrone, Tipu Sultan Wekipedia.
22. Francis Buchanan, A Journey From Madras Through the Countries of Mysore, Canara and Malabar, Vol-I, First Edition-1807, Government of Karnataka 2010, Pp82-83.
23. Souvenir, Seminar on National Integration with Special Reference to Tipu Sultan, Paper Presentor- M.B. Rajamami, Paper-Tipu Sultan and Egalitarianism, Organised by Department of Studies in History, University of Mysore, Manasagangotri, Mysore, 23-24 September, 1989, Pp122.
24. ಬಿ. ಷೇಕ್ ಅಲಿ, ರಾಷ್ಟ್ರೀಯ ಜೀವನ ಚರಿತ್ರೆ ಮಾಲೆ, ಟಿಪ್ಪು ಸುಲ್ತಾನ್, ನ್ಯಾಷನಲ್ ಬುಕ್ ಟ್ರಸ್ಟ್, ಇಂಡಿಯಾ, 1979, ಪುಟ70–71.
25. Souvenir, Seminar on National Integration with Special Reference to Tipu Sultan, Paper Presentor- K.S. Shivanna, Paper-Tipu Sultan’s policy Towards Two Hindu Religious Establishments: Sringeri and Melukote, Organised by Department of Studies in History, University of Mysore, Manasagangotri, Mysore, 23-24 September, 1989, Pp80-81.

26. ಸೂರ್ಯನಾಥ್ ಕಾಮತ್, ಕರ್ನಾಟಕ ಸಂಕ್ಷಿಪ್ತ ಇತಿಹಾಸ, ಎಂಸಿಸಿ ಪಬ್ಲಿಕೇಷನ್ಸ್, ಬೆಂಗಳೂರು, 1973, ಪುಟ222.

27. ಬಿಪಿನ್ ಚಂದ್ರ, ಆಧುನಿಕ ಭಾರತದ ಇತಿಹಾಸ, ಕನ್ನಡ ಅನುವಾದ: ಹೆಚ್.ಎಸ್. ಗೋಪಾಲರಾವ್, ನವಕರ್ನಾಟಕ ಪಬ್ಲಿಕೇಷನ್ಸ್ ಪ್ರೈವೇಟ್ ಲಿಮಿಟೆಡ್, ಬೆಂಗಳೂರು, 2012, ಪುಟ41–42.

28. Souvenir, Seminar on National Integration with Special Reference to Tipu Sultan, Paper Presentor- Sebastian Joseph, Paper-Writings on Tipu: A Historical Critique, Organised by Department of Studies in History, University of Mysore, Manasagangotri, Mysore, 23-24 September, 1989, Pp56-57.

29. ಭಾರತದ ಪ್ರೌಢ ಇತಿಹಾಸ, ಆಧುನಿಕ ಭಾರತ, ಭಾಗ–3, ಬ್ರಿಟಿಷ್ ಪ್ರಾಬಲ್ಯದ ಸ್ಥಾಪನೆ(1765–1798)ಮೂಲ: ಆರ್. ಸಿ. ಮಜುಂದಾರ್, ಹೆಚ್.ಸಿ. ರಾಯ್‌ಚೌಧರಿ, ಕಾಲೀಕಿಂಕರದತ್ತ, ಅನುವಾದ: ಎನ್.ಎಸ್. ಶಾರದಾ ಪ್ರಸಾದ್, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು, 2012, ಪುಟ630–631.